ನ್ಯಾಯಾಲಯದ ಒಂದು ಪರಿಮಿತಿಯಲ್ಲಿ ತರಲಿಕ್ಕೆ ಸಾಧ್ಯವಿಲ್ಲವೇ? ಈಗ ಖಾಲಿಯಿರುವ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಅರ್ಜಿಗಳನ್ನು ಏನಾದರೂ ಕರೆದಿದ್ದೀರಾ? ಈ ಬಗ್ಗೆ ಯಾರಾದರೂ ಅರ್ಜಿಗಳನ್ನು ಹಾಕಿದ್ದಾರೆಯೇ? ಎಂಬುದನ್ನು ಮಾನ್ಯ ಕಾನೂನು ಮಂತ್ರಿಗಳು ಹೇಳಬೇಕು.

**ಶ್ರೀ ಎಂ.ಸಿ. ನಾಣಯ್ಯ:-** ಈಗ ಡಿಸ್ಟ್ರಿಕ್ಟ್ ಜಡ್ಜ್‌ಸ್ ಹುದ್ದೆಗಳು ಕೆಲವು ಖಾಲಿ ಇವೆ. ಅವುಗಳನ್ನೂ ತುಂಬಬೇಕಾಗುತ್ತದೆ.

**ಅಧ್ಯಕ್ಷರು:-** ಮಾನ್ಯ ಸದಸ್ಯರು ಏನು ಸಲಹೆ ಮಾಡುತ್ತಿದ್ದಾರೆ ಎಂದರೆ ಮ್ಯಾಜಿಸ್ಟ್ರೇಟ್ ಹುದ್ದೆಗಳಿಗೆ ಇನ್‌ಸೆಂಟೀವ್ಸ್ ಕಡಿಮೆ ಅದಕ್ಕೇ ಯಾರೂ ಅಡ್ವೋಕೇಟ್ಸ್‌ಆ ಹುದ್ದೆಗೆ ಬರುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ:- ಮಾನ್ಯ ಸದಸ್ಯರು ಮ್ಯಾಜಿಸ್ಟ್ರೇಟ್ ಹುದ್ದೆಗೆ ಇನ್‌ಸೆಂಟೀವ್ ಕಡಿಮೆಯಾಗಿದೆ. ಅದನ್ನು ಹೆಚ್ಚು ಮಾಡಿ ಎಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. ಆ ಸಲಹೆಯನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಪ್ರಶ್ನೆ ಸಂಖ್ಯೆ 61 (21) ಮತ್ತು ಹೆಚ್.ಎನ್.ನಂಜೇಗೌಡರವರ ಪ್ರಶ್ನೆ ಸಂಖ್ಯೆ 69 (447) ಎರಡೂ ಪ್ರಶ್ನೆ ಒಂದೇ ರೀತಿ ಇರುವುದರಿಂದ, ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳುತ್ತಿದ್ದೇನೆ.

## ವಿಷಯ :- ವಿದೇಶೀ ಕಂಪನಿಗಳ ಮೂಲಕ ವಿದ್ಯುತ್ ಉತ್ಪಾದನೆ

ಚುಕ್ಕ ಗುರುತಿನ ಪ್ರಶ್ನೆ ಸಂಖ್ಯೆ 61(21) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

1. ವಿದ್ಯುತ್ ಉತ್ಪಾದನೆಗಾಗಿ ಯಾವ, ಯಾವವಿದೇಶಿ ಧರ್ಮಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.
2. ಈ ತಿಳಿವಳಿಕೆ ಪತ್ರ: ಕರಾರಿನ ನಿಬಂಧನೆಗಳೇನು ಮತ್ತು ಈ ಧರ್ಮಗಳ ಮೇಲಿ ಬಂಡವಾಳ ಹೂಡುವುದರಿಂದ ಆಗುವ ಅಂದಾಜು ಉತ್ಪಾದನೆ ಎಷ್ಟು?

**ಶ್ರೀ ಜೆ.ಹೆಚ್. ಪಟೇಲ್**
**ಉಪ ಮುಖ್ಯ ಮಂತ್ರಿಗಳು**

1. ವಿದ್ಯುತ್ ಉತ್ಪಾದನೆಗಾಗಿ ನಾಲ್ಕು ವಿದೇಶಿ ಧರ್ಮಗಳ ಜೊತೆ ಒಡಂಬಡಿಕೆಗಳನ್ನು ಮಾಡಿರುವುದನ್ನು ಅನುಸರಿಸಲಾಗುತ್ತಿದೆ. ವಿದೇಶಿ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ:

1. ಮೆ: ಕೊಜಿಂಟ್ರಿಕ್ಸ್, ಯು.ಎಸ್.ಎ.
2. ಮೆ: ಹಾಕ್ ಇಂಟರ್ ನ್ಯಾಷನಲ್, ಯು.ಎಸ್.ಎ.
3. ಮೆ: ಪಿಪಿಐ, ಯು.ಎಸ್.ಎ.
4. ಮೆ: ಟ್ಯಾಪ್‌ಕೂ ಯು.ಎಸ್.ಎ.

ಮೆ: ಕೋಜೆಂಟ್ರಿಕ್ಸ್ ಯು.ಎಸ್.ಎ. ಇದರ ಸಂಬಂಧದಲ್ಲಿ ವಿದ್ಯುತ್ ಖರೀದಿ ಒಪ್ಪಂದ (ಪಿಪಿಎ) ಸಹಿ ಮಾಡಲಾಗಿದೆ.

2) ಮೇಲೆ ತಿಳಿಸಿದ ನಾಲ್ಕು ವಿದೇಶಿ ಫರ್ಮುಗಳ ಜೊತೆ ಮಾಡಿಕೊಳ್ಳಲಾಗಿರುವ ಒಡಂಬಡಿಕೆಗಳ ಸಾಮಾನ್ಯ ನಿಬಂಧನೆಗಳು ಈ ಕೆಳಕಂಡಂತಿವೆ.

1. ಖಾಸಗಿ ಪಕ್ಷಕಾರರು ಯೋಜನೆಯ ವಿಸ್ತೃತ ಟೆಕ್ನೋ ಎಕನಾಮಿಕ್ (ತಂತ್ರಜ್ಞಾನ - ಆರ್ಥಿಕ) ಅಧ್ಯಯನ ನಡೆಸತಕ್ಕುದು ಮತ್ತು ಅದರ ನಿರ್ಣಯಾಂಶಗಳನ್ನು ರಾಜ್ಯ ಸರ್ಕಾರಕ್ಕ ಸಲ್ಲಿಸತಕ್ಕುದು.
2. ರಾಜ್ಯ ಸರ್ಕಾರವು ನೆರವು ನೀಡತಕ್ಕುದು ಮತ್ತು ಭಾರತ ಸರ್ಕಾರದ ಮತ್ತು ಅದರ ಸಂಬಂಧಿ ಏಜೆನ್ಸಿಗಳ: ಇಲಾಖೆಗಳ ಎಲ್ಲ ಅವಶ್ಯಕ ಫರ್ಮಿಟ್ಟುಗಳು. ಲೈಸೆನ್ಸುಗಳು, ಇತ್ಯಾದಿಗಳನ್ನು ಪಡೆದುಕೊಳ್ಳಲು ತಮ್ಮ ಅಧಿಕಾರ ಉಪಯೋಗಿಸತಕ್ಕುದು.
3. ಒಂದು ನಿರ್ಮಾಣದ ಒಪ್ಪಿದ ಅನುಸೂಚಿಯ ಮೇಲೆ ಯೋಜನೆಯನ್ನು ಕಾರ್ಯಗತಗೊಳಿಸಲು ಖಾಸಗಿ ಪಕ್ಷಕಾರರು ಒಪ್ಪಂದ ಪತ್ರ ಬರೆದು ಕೊಡತಕ್ಕದು.
4. ಕರ್ನಾಟಕದ ನಿವಾಸಿಗಳಿಗೆ ನಿಯೋಜನೆಯಲ್ಲಿ ಅದ್ಯತೆ ನೀಡಲು ಖಾಸಗಿ ಪಕ್ಷಕಾರರು ಒಪ್ಪಿಕೊಳ್ಳುತ್ತಾರೆ.
5. ಖಾಸಗಿ ಪಕ್ಷಕಾರರು ಕಾರ್ಯಾರಂಭ ಮಾಡಿದ ದಿನಾಂಕದಿಂದ ಪ್ರಾರಂಭದ ಮೂವತ್ತು ವರ್ಷಗಳ ಕಾಲ ಯೋಜನೆಯಿಂದ ವಿದ್ಯುತ್ ಉತ್ಪಾದಿಸಿ ಮಾರಾಟ ಮಾಡಲು ಅವಶ್ಯಕ ಲೈಸೆನ್ ಅನ್ನು ಮಂಜೂರು ಮಾಡಲು ಮತ್ತು ಒಮ್ಮೆ 20 ವರ್ಷಗಳ ಹೆಚ್ಚಿನ ಅವಧಿಗೆ ಲೈಸೆನ್ಸ್ ನವೀಕರಣ ಮಾಡಲು ಉಪಬಂಧ ಕಲ್ಪಿಸಲು ರಾಜ್ಯ ಸರ್ಕಾರ ಸಮ್ಮತಿಸುತ್ತದೆ.
6. ಕೈಗಾರಿಕಾ ಗ್ರಾಹಕರಿಗೆ ಮಾರಾಟ ಮಾಡಿದ ಮತ್ತು ಕ.ವಿ.ಮಂ.ಯ ಟ್ರಾನ್ಸ್‌ಮಿಷನ್ ಗ್ರಿಡ್ ಮೂಲಕ ರವಾನಿಸಿದ ವಿದ್ಯುತ್ ಬಗ್ಗೆ, ವೀಲಿಂಗ್ ಚಾರ್ಜುಗಳನ್ನು ಖಾಸಗಿ ಪಕ್ಷಕಾರರ ಮತ್ತು : ಅಥವಾ ಅದರ ಉತ್ತರಾಧಿಕಾರಿ ಕಂಪನಿ ಮತ್ತು ಕ.ವಿ.ಮಂ.ಯ ನಡುವೆ ಚರ್ಚೆ ನಡೆದ ತರುವಾಯ ಇತ್ಯರ್ಥಗೊಳಿಸಲಾಗುವುದು ಮತ್ತು ಖಾಸಗಿ ಪಕ್ಷಕಾರ ಮತ್ತು: ಅಥವಾ ಅದರ ಉತ್ತರಾಧಿಕಾರಿ ಕಂಪನಿ ಮತ್ತು ಕ.ವಿ.ಮಂಗಳ ನಿರ್ಧರಿಸಬಹುದಾದಂತೆ ಸಂದಾಯಮಾಡಲಾಗುವುದು ಅಥವಾ ಇತರ ರೀತಿಯಲ್ಲಿ ಹೊಂದಾಣಿಕೆಮಾಡಲಾಗುವುದು.
7. ರಾಜ್ಯ ಸರ್ಕಾರವು ವಿದ್ಯುತ್ ಸ್ಥಾವರದ ಅಂತಿಮ ಸಾಮರ್ಥ್ಯದವರೆಗೆ ನೀರು ಸರಬರಾಜು ಮಾಡುವ ಭರವಸೆ ನೀಡತಕ್ಕುದು ಹಾಗೂ ಸ್ಥಾವರದ ನಿರ್ಮಾಣ ಮತ್ತು ಪ್ರವರ್ತನೆಗೆ ನೀರಿನ ಸರಬರಾಜನ್ನು ಸಕಾಲದಲ್ಲಿ ವ್ಯವಸ್ಥೆ ಮಾಡತಕ್ಕುದು.
8. ಒಪ್ಪಂದದ ತಿಳಿವಳಿಕೆ ಪತ್ರ (ಎಂ.ಓ.ಯು)ವು ಅದಕ್ಕೆ ಸಹಿ ಮಾಡಿದ ದಿನಾಂಕದಿಂದ ಗೊತ್ತುಪಡಿಸಲಾದ ಅವಧಿಗೆ ಮಾನ್ಯವಾಗಿರುತ್ತದೆ.

9. ವಿದ್ಯುತ್ ಖರೀದಿ ಒಪ್ಪಂದವನ್ನು ಮೆ: ಕೊಜೆಂಟ್ರಿಕ್ಸ್, ಯುಎಸ್ಎರವರ ಜೊತೆ ಮಾಡಲಾಗಿದೆ. ವಿದ್ಯುತ್ ವೆಚ್ಚ ಸೀಲಿಂಗ್ ವಿಮಿಟನ್ನು ಖರೀದಿ ಒಪ್ಪಂದದಲ್ಲಿ ರೂ. 4387.48 ಕೋಟಿಗಳಿಗೆ ದಿನಾಂಕ 1-1-97ಕ್ಕೆ ನಮೋದಿಸಲಾಗಿದೆ. ವಿದ್ಯುತ್ ಯೋಜನೆಗಳ ವೆಚ್ಚವನ್ನು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದೊಡನೆ ಸಮಾಲೋಚಿಸಿ ತೀರ್ಮಾನಿಸಲಾಗುವುದು. ಇತರ ಮೂರು ಫರ್ಮಗಳಿಗೆ ಸಂಬಂಧಿಸಿದ ವಿದ್ಯುತ್ ಖರೀದಿ ಒಪ್ಪಂದ ಯೋಜನಾ ವೆಚ್ಚ ಇತ್ಯಾದಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಯೋಜನೆಗಳಿಂದ ಅಂದಾಜುಮಾಡಲಾದ ವಿದ್ಯುತ್ ಉತ್ಪಾದನೆ 2600 ಮೆಗಾವಾಟ್‌ಗಳು.

## ವಿಷಯ :- ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಒಪ್ಪಂದ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ69(447)

ಶ್ರೀ. ಹೆಚ್.ಎನ್. ನಂಜೇಗೌಡ (ಬಸವನಗೂಡಿ)

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ವಿದ್ಯುತ್ ಯೋಜನೆ ಪ್ರವಾಸೋದ್ಯಮ ಮತ್ತು ಇಂಥಹ ವಿಷಯಗಳಲ್ಲಿ ಮಲ್ಟಿನ್ಯಾಷನಲ್ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಸಂಸ್ಥೆಗಳೊಡನೆ?

ಆ) ಈ ಮಲ್ಟಿ ನ್ಯಾಷನಲ್ ಸಂಸ್ಥೆಗಳ ಹೆಸರು, ಜಲ ಹಾಗೂ ಶಾಖೋತ್ಪನ್ನ ವಿದ್ಯುತ್ ಯೋಜನೆಗಳ ವಿವರ, ಅದರ ಖರ್ಚಿನೊಂದಿಗೆ ಉತ್ಪನ್ನ ಮತ್ತು ಈ ಯೊಜನೆಗಳನ್ನು ಆರಂಭ ಮಾಡುವ ಹಾಗೂ ಮುಕ್ತಾಯಗೊಳ್ಳುವ ವಿವರಗಳನ್ನು ನೀಡತಕ್ಕದ್ದು.

ಇ) ಈ ಯೋಜನೆಗಳಿಂದ ರಾಜ್ಯದ ಬಂಡವಾಳ ಪಾಲು ಮತ್ತು ಹೊರೆಯ ಪ್ರಮಾಣ ತಿಳಿಸುವುದು.

**ಶ್ರೀ. ಜೆ.ಹೆಚ್. ಪಟೇಲ್**
**(ಉಪ ಮುಖ್ಯಮಂತ್ರಿಗಳು)**

ಅ) ಹೌದು. 4 ವಿದೇಶಿ ಸಂಸ್ಥೆಗಳೊಡನೆ ಒಡಂಬಡಿಕೆಗಳನ್ನು ಮಾಡಿರುವುದನ್ನು ಅನುಸರಿಸಲಾಗುತ್ತಿದೆ.

ಆ) ವಿದೇಶಿ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಗಳನ್ನು ಅನುಸರಿಸುತ್ತಿರುವ ವಿದ್ಯುತ್ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ. (ಅ) ಕೋಜೆಂಟ್ರಿಕ್ಸ್ ಯು.ಎಸ್.ಎ. 1000 ಮೆ.ವಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಮಂಗಳೂರು (ಅ) ಹೆಚ್.ಓ.ಕೆ. ಇಂಟರ್‌ನ್ಯಾಷನಲ್, ಯು.ಎಸ್.ಎ. 500 ಮೆ.ವಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಹೊಸಪೇಟೆ. (ಇ) ಟ್ಯಾಪ್ಕೊ, ಯು.ಎಸ್.ಎ. 600 ಮೆ. ವಾ.ಜಲ ವಿದ್ಯುತ್ ಕೇಂದ್ರ, ಅಲಮಟ್ಟಿ ಅಣೆಕಟ್ಟು (ಮೊದಲನೇ ಹಂತ). (ಈ) ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್, ಯು.ಎಸ್.ಎ. 2250 ಮೆ.ವಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ, ರಾಯಚೂರು (5 ಮತ್ತು 6ನೇ ಘಟಕ).